Rega No. M 1229 | 43rd Year | Sri 'Satyavadi' Mysore | 6—3—1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೇದಾರ್ ಎ. ನಿ ಸುಬ್ಬರಾಯುರು [ಬಿಡಿ ಪ್ರತಿಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಆಹಾರ ಧಾನ ವಾಪಾರದ ಬಗೆ ಮೆಸೂರು ಸರ್ಕಾರ ನಿರ್ಧರಿಸಿಲ

ಬ್ರಿಟನ್ನಿನ ಸ್ವಾಗತ

ಲಂಡನ್ 5 — ತುರ್ಕಿ, ಇರಾಕ್ ಮತ್ತು ಪಾಕಿಸ್ತಾನದ ಸಂಗಡ ಅಮೇರಿಕಾ ದ್ವಿಮುಖ ಒಪ್ಪಂದ ಮಾಡಿಕೊಂಡಿದ್ದನ್ನು ಬ್ರಿಟನ್ ವಿದೇಶ ಇಲಾಖೆ ಸ್ವಾಗತಿಸಿದೆ

ಸಶಸ್ತ್ರ ಸೇನೆ ಉಪಯೋಗ

ಕರಾಚಿ 5 — ಆಕ್ರಮಣ ವಿರುದ್ಧವಾಗಿ ಪಾಕಿಸ್ತಾನದೊಡನೆ ಸಹಕರಿಸಲು ಪಾಕಿಸ್ತಾನ ಮತ್ತು ಅಮೇರಿಕಾಗಳ್ಳಿ ದ್ವಿಮುಖ ಒಪ್ಪಂದದಲ್ಲಿ ಸಶಸ್ತ್ರ ಸೈನಿಕರನ್ನು ಉಪಯೋಗಿಸುವ ಅವಕಾಶವೂ ಇದೆ.

ಲಂಡನ್ನಿಗೆ ಭೇಟಿ

ಲಂಡನ್ 5 — ಕೈವ್ಲಿನ್ನಿನ ಉಸ್ಮತ ನಾಯಕರಲ್ಲೊಬ್ಬರಾದ ಮಿಕ್ಹೇಲ್ ಸುಸ್ಲೋವ್ ಲಂಡನ್ನಿಗೆ ಭೇಟಿ ಕೊಡುವರು.

ಭೂ ಸುಧಾರಣೆ ಬಗ್ಗೆ

ನವ ದೆಹಲಿ 5 — ಶನಿವಾರ ಇಲ್ಲಿ ಪ್ರಾರಂಭವಾಗುವ ಪಾರ್ಲಿಮೆಂಟಿನ ಮುಂದಿನ ಭೂ ಸುಧಾರಣೆಯ ಕಾಂಗ್ರೆಸು ನಿರ್ಣಯ ಅನುಷ್ಠಾನಕ್ಕೆ ತರುವುದೆಂದು ಗೊತ್ತಾಗಿದೆ. ಚರ್ಚೆಯಲ್ಲಿ ಮೊದಲನೆ ಸ್ಥಾನ ದೊರೆಯಲಿದೆ. ಅಖಿಲ ಭಾರತ ಕಾಂಗ್ರೆಸಿನ ಒಳಗೆಗಳನ್ನು ಪ್ರತಿನಿಧಿಗಳಾಗಿ ಬಂದಿದ್ದರು

ಆಗಮನ

ಕಲ್ಕತ್ತಾ 4 — ಬಾಂಕಾಕಿಗೆ ತೆರಳುವ ದಾರಿಯಲ್ಲಿ ಭಾರತದ ಆಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು 14 ನೆಯ ತಾ|| ಇಲ್ಲಿಗೆ ಬರುವರು

ಕೃಶ್ಚೇವ್ ಭೇಟಿ

ಲೆಪ್ಜಿಗ್ 5 — ರಷ್ಯ ಪ್ರಧಾನಿ ಕೃಶ್ಚೇವರು ಇಲ್ಲಿನ ಸಂತೆಯಲ್ಲಿ ಭಾರಿಕ ಪಸಿಲಿಯರ್ಸ್‌ಗೆ ಭೇಟಿಕೊಟ್ಟರು

ಕಾತುರ ಬೇಡ

ಅಂಕಾರ 5 — ತುರ್ಕಿ, ಇರಾಕ್, ಪಾಕಿಸ್ತಾನಗಳೊಡನೆ ದ್ವಿಮುಖ ಒಪ್ಪಂದ ಮಾಡಿಕೊಂಡು ಅಮೇರಿಕಾ ಸಹಿ ಮಾಡಿದ ಸಂದರ್ಭದಲ್ಲಿ ಅಮೇರಿಕಾ ರಾಯಭಾರಿ ಫ್ಲೆಚರ್ ವಾರ್ಡ್ ಹೇಳಿಕೆಯನ್ನಿತ್ತು, ತುರ್ಕಿ, ಇರಾಕ್ ಮತ್ತು ಪಾಕಿಸ್ತಾನದ ಸ್ವಾತಂತ್ರ್ಯಕ್ಕೆ ಮತ್ತು ಪ್ರಾದೇಶಿಕ ವೈಶಿಷ್ಟ್ಯತೆಯನ್ನು ಅಮೇರಿಕಾ ಮಾನ್ಯ ಮಾಡಿದೆ ಎಂದರು ಕುರಿತು ವಿದೇಶ ಮಂತ್ರಿ ಹೇಳಿಕೆಯಿತ್ತು, ಈ ಒಪ್ಪಂದದಿಂದ ಯಾವ ದೇಶವೂ ಕಳವಳಪಡಬೇಕಾಗಿಲ್ಲ ಎಂದರು

ಕಾಶ್ಮೀರ ಪ್ರಶ್ನೆ

ಕರಾಚಿ 5 — ಕಾಶ್ಮೀರ ಪ್ರಶ್ನೆಯು ನೇಲೆ ಅತ್ಯಲ್ಪ ಕಾಲಾವಧಿಯಲ್ಲಿ ಪರಿಶೀಲನಾ ಕಾರ್ಯಕ್ಕೆ ಕೈಗೆಜ್ಜಬೇಕೆಂದು ವಿಶ್ವ ಭದ್ರತಾ ಸಮಿತಿಯನ್ನು ಕೇಳುವದಾಗಿ ಪಾಕಿಸ್ತಾನ ವಿದೇಶ ಮಂತ್ರಿ ಶಾಖೆಯ ಪ್ರಮುಖನೋರ್ವನು ತಿಳಿಸಿದ್ದಾನೆ.

× ಕರೀಂಗಂಜ್ 5 — ಕರೀಂಗಂಜಿನ ಗಡಿಯಲ್ಲಿ ಪಾಕಿಸ್ತಾನದ ಗೋಳಿಬಾರಿನಿಂದ 3 ಜನ ಭಾರತೀಯರಿಗೆ ಗಾಯವಾಗಿದೆ

ಬೆಂಗಳೂರು 5 — ಮುಖ್ಯಮಂತ್ರಿ ಶ್ರೀ ಬಿ ಡಿ ಜತ್ತಿಯವರು ವಿಧಾನ ಸಭೆಯಲ್ಲಿ ಹೇಳಿಕೆಯಿತ್ತು, ಸರ್ಕಾರ ಆಹಾರ ಧಾನ್ಯ ವ್ಯಾಪಾರ ಮಾಡುವ ಅಂಶ ಪರಿಶೀಲನೆಯಲ್ಲಿದೆ ಎಂದರು ಈ ಬಗ್ಗೆ ನಿರ್ದಿಷ್ಟ ಸೂಚನೆ ಏನೂ ಇಲ್ಲವೆಂದು ಇನ್ನೂ ಸಮಾಲೋಚನೆ ಘಟ್ಟದಲ್ಲಿದೆ ಎಂದು ಆಹಾರ ಮಂತ್ರಿ ಶ್ರೀ ಪಾಟೀಲರು ತಿಳಿಸಿದ್ದಾರೆ

ಡೆಲ್ಸ್ ಸಂಪರ್ಕ ನಿಶೇಧ

ವಾಷಿಂಗ್ಟನ್ 4 — ಕ್ಯಾನ್ಸರು ಹರಡದಂತೆ ತಡೆಗಟ್ಟಲು ಅಮೇರಿಕಾದ ಸಂಸ್ಥಾನ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲ್ಸ್‌ರಿಗೆ ರೇಡಿಯೋ ಆಕ್ಟೀವ್ ಭಂಗಾರದ ಇಂಜಕ್ಷನ್ ಕೊಟ್ಟಿರುವದರಿಂದ, ಅವರಲ್ಲಿ ಆಪಾಯಕಾರಿ ರೇಡಿಯೋ ಚಟುವಟಿಕೆ ಉಂಟಾಗಿರುವದರಿಂದ ಅಧ್ಯಕ್ಷ ಐಸೆನ್‌ಹೋವರರನ್ನೊಳಗೊಂಡು ಅವರನ್ನು ಯಾರೂ ನೋಡುವಂತಿಲ್ಲ

ಡಿಕ್ಕಿ ಬಡಿದು ಮರಣ

ಬೆಂಗಳೂರು 5 — ಬನಶಂಕರಿ ಬಿ ಎಂ ಎಸ್ ಇಂಜಿನಿಯರಿಂಗು ಕಾಲೇಜಿನ ಸಿವಿಲ್ ಇಂಜಿನಿಯರಿಂಗಿನ ಕಡೆಯ ವರ್ಷದ ವಿದ್ಯಾರ್ಥಿಗಳಾದ 25 ವರ್ಷ ವಯಸ್ಸಿನವರುಗಳಾದ ಕೇರಳದ ಕೆ ಏ ರೆ ಮಾಂಡ್ ಮತ್ತು ಪಿ ಜೆ ವರೋನಿ ಇಲ್ಲಿಗೆ ಸುಮಾರು 7 ಮೈಲಿಗಳ ದೂರವಿರುವ ಬ್ಯಾಗ್ರಾ ಮೋಟಾರು ಬೈಸಿಕಲ್ ಢಿಕ್ಕಿ ಬಡಿದು ಸ್ಥಳದಲ್ಲೇ ಇವರಿರು ಸತ್ತು ಮತ್ತೊಬ್ಬರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸತ್ತರು

× ವಾಷಿಂಗ್ಟನ್ 5 — ಅಮೇರಿಕದ ಪಯನೀರ್ 4 ಚಂದ್ರನನ್ನು ದಾಟಿ ಸೂರ್ಯನ ಸುತ್ತ ಸುತ್ತಲಾರಂಭಿಸಿದೆ

ಯುವಕನ ಕೊಲೆ

ಕೋಲಾರ 4 —ಮಾಲೂರು ತಾಲ್ಲೂಕಿನ ಮಡಿವಾಳ ಗ್ರಾಮದಲ್ಲಿರುವ ತನ್ನ ಮಾವನ ಮನೆಗೆ ತನ್ನ ವತ್ನಿಯನ್ನು ಕರೆದುಕೊಂಡು ಹೋಗಲು ನಾರಾಯಣಪ್ಪನೆಂಬ 30 ವರ್ಷದ ಯುವಕನು ಹೋದನೆಂದೂ, ಗೃಹಕಲಹ ಕಾರಣ ಆಕೆ ತನರು ಮನೆಯಲ್ಲಿದ್ದಳೆಂದೂ, ನಾರಾಣಪ್ಪನು ಸಂಜಾಯಿತಿ ಕರೆದಿದ್ದನೆಂದೂ, ಸಂಜಾಯಿತಿಗೆ ಮಾವ ಬಾರದಿರಲು ಕರೆಯಲು ಹೋದನೆಂದೂ, ಸಾಯುವ ವರಿಗೆ ಹೊಡೆಕಬೆತ್ತಿಂದೂ ಕಾಣುಶ್ಯದೆ ಹೊಡಕೋಟಿ ಕಾ|| 3 ಮೈಲಿ ದೂರದಲ್ಲಿ ಹೆಣ ಸಿಕ್ಕಿತು

2 ಪಾಲಿಟೆಕ್ನಿಕುಗಳು

ಮೈಸೂರು ಪ್ರಾಂತದಲ್ಲಿ ಮುಂದಿನ ಸಾಲಿನಲ್ಲಿ 2 ಪಾಲಿಟೆಕ್ನಿಕುಗಳು ಆರಂಭವಾಗುವದಾಗಿ ಶಿಕ್ಷಣ ಮಂತ್ರಿ ಶ್ರೀ ಅಣ್ಣಾರಾವ್ ಗುಣಮುಖಿ ವಿಧಾನಸಭೆಯಲ್ಲಿ ತಿಳಿಸಿದರು

ಹೊಸ ಉಪ ಮಂತ್ರಿ

ನವ ದೆಹಲಿ 5 — ಸಾಮೂಹಿಕ ಅಭಿವೃದ್ಧಿಯ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ ಬಿ ಎಸ್ ಮೂರ್ತಿ ಉಪ ಮಂತ್ರಿ ಆಗಿ ನೇಮಿತರಾದರು

ನಾಳೆಯ ಪಂಚಾಂಗ

ಅ|| ಮಹಾವಿದ್ವಾನ್ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
7 ತ್ರಯೋದಶಿ ಧನಿಷ್ಠ

× ಕೋಲಾರ ಭಂಗಾರದ ಗಣಿಯಲ್ಲಿ ಭಂಗಾರ ಸಿಗುವದು ಕಡಿಮೆ ಆಗಿರುವದು ಭಂಗಾರದ ಉತ್ಪಾದನೆ ಇಳುವರಿ ಆಗಲು ಕಾರಣವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

5 ಜನವರಿಗೆ ದಂಡ

ಬೆಂಗಳೂರು 5— ಹಳೇ ಮೈಸೂರಿನಲ್ಲಿ ಜನವರಿ ತಿಂಗಳಲ್ಲಿ ಲಂಚಪಡೆದ ತಪ್ಪು ಸ್ವೀಕರಿಸಿದ ಅಪರಾಧಕ್ಕಾಗಿ 5 ಜನರಿಗೆ ಶಿಕ್ಷೆ ಸಲ್ಲಿಸಲಾಗಿದೆ.

ಆಹಾರ ಶೇಖರಣೆ

ನವದೆಹಲಿ 4— 58 ರಲ್ಲಿ ಅತ್ಯುಪಯುಕ್ತ ವಸ್ತುಗಳ ಕಾನೂನಿನ ಪ್ರಕಾರ ಕೇಂದ್ರ ಹಾಗೂ ರಾಜ್ಯಸರಕಾರಗಳು ಸುಮಾರು 3-16 ಲಕ್ಷ ಟನ್ನುಗಳ ಪ್ರಮಾಣದ ಆಹಾರ ಧಾನ್ಯಗಳನ್ನು ಶೇಖರಿಸಿವೆ ಎಂಬುದು ದೊರೆತಿರುವ ಅಂಕಿಅಂಶಗಳಿಂದ ತಿಳಿದುಬಂದಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಅಧಿಕಾರಿಗಳ ನೇಮಕ

ನವದೆಹಲಿ ೫— ೫೭ ರಲ್ಲಿ ನಡೆದ ಪರೀಕ್ಷೆಗಳ ಫಲಿತಾಂಶಗಳ ಆಧಾರದ ಮೇಲೆ ಐ ಎ ಎಸ್‌ಗೆ 64, ಐ ಎಫ್ ಎಸ್‌ಗೆ 10 ಮತ್ತು ಐ ಪಿ ಎಸ್‌ಗೆ 33 ರಂತೆ ಒಟ್ಟು 107 ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯ ಸಭೆಯಲ್ಲಿ ತಿಳಿಸಲಾಯಿತ.

ಭೂ ಸುಧಾರಣೆ

ನವದೆಹಲಿ 4.... ಕೇಂದ್ರ ರಾಜ್ಯದ ಯೋಜನೆಯಲ್ಲಿ ಭೂಸುಧಾರಣೆ ಕಾರ್ಯ ಯೋಜನೆ ಯಾವುದೂ ಇರುವುದಿಲ್ಲವೆಂದೂ, ಈ ಸಂಬಂಧದಲ್ಲಿ ಯಾವ ಕಾರ್ಯ ಯೋಜನೆಯೂ ಬಂದಿಲ್ಲವೆಂದೂ ರಾಜ್ಯ ಸಭೆಯಲ್ಲಿ ತಿಳಿಸಲಾಯಿತು.

ರೈಲ್ವೆಗೆ ನಷ್ಟ

ನವದೆಹಲಿ ೪.... ಸರಕುಗಳ ಸಾಗಾಣಿಕೆಯ ಸಂಬಂಧದಲ್ಲಿ ರೈಲು ಮಾರ್ಗ ರಸ್ತೆ ಮಾರ್ಗಗಳ ನಡುವೆ ೫೮-೫೯ ರಲ್ಲಿ ಸ್ಪರ್ಧೆ ಏರ್ಪಟ್ಟಿದ್ದರಿಂದ ರೈಲ್ವೆಯು ವರಿಗೆ ನಷ್ಟವುಂಟಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

ಪ್ರದರ್ಶನಕ್ಕೆ ಭೇಟಿ

ನವದೆಹಲಿ 3— ಇಲ್ಲಿ ಏರ್ಪಡಿಸಲಾಗಿರುವ ಕುಟುಂಬ ಯೋಜನಾ ವಸ್ತು ಪ್ರದರ್ಶನಕ್ಕೆ ಕಳೆದ 15 ದಿನಗಳಲ್ಲಿ 60 ಸಾವಿರ ಮಂದಿ ಸ್ತ್ರೀಪುರುಷರು ಭೇಟಿ ಇತ್ತಿರುವರು.

ಮಾಸ್ಕೋದಲ್ಲಿ ಸಿಕ್ರೋಮಾ ಚಲಚ್ಚಿತ್ರಾಲಯ !

ಚಲಚ್ಚಿತ್ರ ಜಗತ್ತಿನಲ್ಲಿ ಯಾಂತ್ರಕಲೆಯ ಅತ್ಯಾಧುನಿಕ ವಿಭಾಗವನ್ನು ಹೊಂದಿರುವ ಸಿಕ್ರೋಮಾ ಚಲಚ್ಚಿತ್ರಾಲಯವನ್ನು ಪ್ರಪ್ರಥಮತಃ ಜುಲೈ ದಿನಾಂಕ 1 ರಂದು ಮಾಸ್ಕೋದಲ್ಲಿ ತೆರೆಯಲಾಗುವುದು ; ವರ್ತುಲಾಕಾರದ ಸಭಾ ಭವನದಲ್ಲಿ ಗೋಡೆಗಳ ಮೇಲೆ ಚಲಚ್ಚಿತ್ರವನ್ನು ತೋರಿಸಲಾಗುವುದು ; ಯಾರೆಲ್ಲಿ ಕುಳಿತಿದ್ದರೂ, ಹಿಂದೆ ಮುಂದೆ ಅಕಡೆ ಈಕಡೆ ಎಲ್ಲಿ ನೋಡಿದರೂ ಒಂದೇ ಚಲಚ್ಚಿತ್ರ ಕಾಣುವುದು !

ಸೂಚನೆ

ನಾಳೆ ಮಹಾ ಶಿವರಾತ್ರಿ ಪ್ರಯುಕ್ತ ಸತ್ಯವಾದಿ ಪ್ರಕಟವಾಗುವದಿಲ್ಲ

ಶ್ರೀ ಬಾಲಾಜಿ ಯಾತ್ರಕಂ

ಬೆಂಗಳೂರು ಸಿಟಿ ಸ್ಪೇಷನ್‌ನಿಂದ

ತಾ|| 12-4-59 ರಲ್ಲಿ ಹೊರಡುವ

ಶ್ರೀ ಬದರೀ-ಕೇದಾರ್-ಕಾಶ್ಮೀರ್ ಕಾಶೀ ಮತ್ತು ಉ|| ಭಾರತ ಸಂಪೂರ್ಣ ಯಾತ್ರೆ

1st ಕ್ಲಾಸ್ ಟೂರಿಸ್ಟ್ ಮತ್ತು ಜನತಾ ಕ್ಯಾರೇಜ್‌ಗಳಲ್ಲಿ ಸೀಟುಗಳಿವೆ

— ವಿವರಗಳಿಗೆ —

ಎಂ ಸುಭಾ ಶಾಸ್ತ್ರಿ (ಫೋನ್ 3910)

ಶ್ರೀ ಕೆಂಗಲ್ ಹನುಮಂತಯ್ಯ ಡಬ್ಬಲ್ ರೋಡ್ ಬೆಂಗಳೂರು - 2

Special Trip for Badri or Kedar & Kashmir on 2 nd May

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ

ಅ ಶೋ ಕಾ ಫಾರ್ಮಸಿ

ಅಶೋಕಾ ಮಾರ್ಕೆಟ್ ಬಜಾರ್ ಮೈಸೂರು

For Quality Printing

L. N. Press

Sivarampet, Mysore

ಶಕ್ತಿಸುಧಾ

ಅತ್ಯುತ್ತಮ ಟಾನಿಕ್

ITEOL-3

THE IDEAL ANTISEPTIC

Non-poisonous, non-corrosive and pleasant smelling. Available in 4 oz and 16 oz. bottles and 1 gallon tins.

TRADE MARK

THE MYSORE INDUSTRIAL & TESTING LABORATORY LTD. BANGALORE-3.

Madras Sales Office:- 35/37, THAMBU CHETTY STREET, MADRAS-1.

Our Bangalore Sales Depot address—

71 / 4 Arcot Sreenivasachar St., Bangalore 2.

ವುಡ್‌ಲ್ಯಾಂಡ್ಸ್ ತೇಜಸ್ವಿ 6 ನೇ ವಾರ

ಸಂಗೀತಪೂರ್ಣ ಹಾಸ್ಯಪ್ರಯು ಚಿತ್ರ — ಸೀರನ ನೃತ್ಯಗಳು ಗೀವಾಳಲರಿನಲ್ಲಿ

ದಿಲ್ಲೀ - ಕ - ಥಗ್ (ಹಿಂದಿ)

ತಾರಾಗಣ - ನೂರ್ತ, ಕಿಶೋರ್, ಸ್ಮೃತಿನಿವಾಸ್ | ದಿನ 3 ಪ್ರದರ್ಶನಗಳು

ತಾ|| 7-3-59 ಶನಿವಾರ ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1 ಗಂಟೆಗೆ ಸ್ಪೆಷಲ್ ಪ್ರದರ್ಶನ ಏರ್ಪಡಿಸಲಾಗಿದೆ

ಅಪೆರಾ— 1-3-59 ರಿಂದ

ಮಾಧವಿ

ನಟವರ್ಗ— ಎಸ್, ಜಾನಕಿ, ದೇವಿಕ, ಮನೋಹರ

ಮನಮೋಹಕ ತಮಿಳು ಚಿತ್ರ — — ಪ್ರತಿದಿನ 3 ಆಟಗಳು

ತಾ|| 7 ಶನಿವಾರ ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 12-30 ಕ್ಕೆ ಸ್ಪೆಷಲ್ ಆಟವನ್ನು ಏರ್ಪಡಿಸಲಾಗಿದೆ

ಗೋರಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಬೇಕಾ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರ ಏಕೈಕ ಕನ್ನಡ ಪತ್ರಿಕೆ ; ವರ್ಷಕ್ಕೆ ಅಂಚೆವೆಚ್ಚ ಸಹಿತ ಪೋಷಕರು ರೂ 25, ಬೆಂಬಲಿಗರು ರೂ 10

Advertise in Goraksana and help

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜ

Edited, Printed & Published by Dharm[illegible] Nimbagal Krishna Rao, at the Satyavadi Press [illegible], Mysore.